

# ಸಾಹಸದ ನಶೆಯಲ್ಲಿ ನಿಶಾ

ನಿಶಾ ಕೊಠಾರಿ ಯಾವ ಹೀರೊಗಿಂತಲೂ ಕಡಿಮೆಯಿಲ್ಲ! ಇದು 'ಬುಲೆಟ್ ರಾಣಿ' ಚಿತ್ರದ ಛಾಯಾಗ್ರಾಹಕ ಸೆಲ್ವಂ ಅವರ ಬಣ್ಣನೆ. ಸೆಲ್ವಂ ಮಾತ್ರವಲ್ಲ, ಸಿನಿಮಾದ ನಿರ್ದೇಶಕ ಸಾಜಿದ್ ಖುರೇಷಿ ಕೂಡ ನಿಶಾ ಬಗ್ಗೆ ಮೆಚ್ಚುಗೆಯ ಮಾತನಾಡುತ್ತಾರೆ. 'ಐದು ಹಾಡು, ಐದು ಫೈಟು' ಎಂದು ನಾಯಕನೊಬ್ಬನ ಪಾತ್ರವನ್ನು ಬಣ್ಣಿಸುವಂತೆ ಖುರೇಷಿ 'ಬುಲೆಟ್ ರಾಣಿ'ಯ ಪ್ರಭಾವಳಿಯನ್ನು ಕಟ್ಟಿಕೊಡುತ್ತಾರೆ. ಇದರರ್ಥ ಇಷ್ಟೇ– ಈವರೆಗೆ ಗ್ಲಾಮರ್ ಗೊಂಬೆಯಾಗಿ ಕಾಣಿಸಿಕೊಂಡಿದ್ದ ನಿಶಾ, ಇದೀಗ ರಫ್ ಅಂಡ್ ಟಫ್ ಪಾತ್ರದಲ್ಲಿ ಪ್ರೇಕ್ಷಕರನ್ನು ರಂಜಿಸುವ ತವಕದಲ್ಲಿದ್ದಾರೆ.

'ಬುಲೆಟ್ ರಾಣಿ' ಕನ್ನಡದ ಜೊತೆಗೆ ತೆಲುಗಿನಲ್ಲೂ ರೂಪುಗೊಂಡಿದೆ. ಸೆನ್ಸಾರ್ ಪ್ರಕ್ರಿಯೆ ಮುಗಿಸಿಕೊಂಡು, ಚಿತ್ರಮಂದಿರಗಳ ಹೊಸ್ತಿಲಲ್ಲಿರುವ ಈ ಸಿನಿಮಾದ ಕಥೆ ಬುಲೆಟ್ ವೇಗದಲ್ಲಿ ಸಾಗುತ್ತದಂತೆ. ಜಡ್ಜ್‌ಮೆಂಟ್ ಗೋಜಿಗೆ ಹೋಗದೆ ಪನಿಷ್‌ಮೆಂಟ್ ನೀಡುವ ದಿಟ್ಟ ಪೊಲೀಸ್ ಅಧಿಕಾರಿಣಿಯೊಬ್ಬಳ ಶಕ್ತಿ ಪ್ರದರ್ಶನದ ಪಾತ್ರ ನಿಶಾ ಅವರಿಗೆ ಸಖತ್ ಖುಷಿ ಕೊಟ್ಟಿದೆ. ಕೆಲವು ದೃಶ್ಯಗಳಲ್ಲವರು ಡ್ಯೂಪ್ ಇಲ್ಲದೆ ನಟಿಸುವ ಮಟ್ಟಿಗೆ ಪಾತ್ರದಲ್ಲಿ ತಲ್ಲೀನರಾಗಿದ್ದಾರೆ. ಸಾಹಸ ದೃಶ್ಯಗಳ ಜೊತೆಗೆ ಪಂಚಿಂಗ್ ಸಂಭಾಷಣೆ ಹಾಗೂ ಹಾಸ್ಯ ಸನ್ನಿವೇಶಗಳು ನಿಶಾ ಅವರಿಗೆ 'ಬುಲೆಟ್ ರಾಣಿ'ಯನ್ನು ಸ್ಮರಣೀಯವಾಗಿಸಿವೆ.

'ರಾಜ್ ದಿ ಶೋಮ್ಯಾನ್' ಚಿತ್ರದಲ್ಲಿ ಪುನೀತ್‌ಗೆ ಜೋಡಿಯಾಗಿ ಗುಬ್ಬಿಮರಿಯಂತೆ ಕಾಣಿಸಿಕೊಂಡಿದ್ದ ನಿಶಾ, 'ದಂಡುಪಾಳ್ಯ'ದ ಪುಟ್ಟ ಪಾತ್ರದಲ್ಲೂ ಗಮನಸೆಳೆದಿದ್ದರು. ಈಗ 'ಬುಲೆಟ್ ರಾಣಿ'ಯಲ್ಲಿ ಹೊಸ ಅವತಾರದಲ್ಲಿ ಇಮೇಜ್ ಬದಲಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ನಿಶಾ ಅವರೊಂದಿಗೆ, ಆಶಿಶ್ ವಿದ್ಯಾರ್ಥಿ ಹಾಗೂ ರಾಜೇಶ್ ಉಪಾಧ್ಯಾಯ ಮುಖ್ಯ ಪಾತ್ರಗಳಲ್ಲಿ ನಟಿಸಿರುವ 'ಬುಲೆಟ್ ರಾಣಿ'ಗೆ ಗುಣವಂತ ಸಂಗೀತ ನೀಡಿದ್ದಾರೆ.

# ಹಳ್ಳಿಗೆ ಬಂದ ಮುತ್ತ!

ವಿಜಯ್ ರಾಘವೇಂದ್ರ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ವಂಶೋದ್ಧಾರಕ' ಚಿತ್ರ 'ಕನ್ನಡ ಮಾಸ' ನವೆಂಬರ್ ಮೊದಲ ವಾರದಲ್ಲಿ ತೆರೆ ಕಾಣುತ್ತಿದೆ. ಹೆಸರೇ ಹೇಳುವಂತೆ ಇದು ಕುಟುಂಬ ಪ್ರಧಾನ ಕಥೆಯ ಸಿನಿಮಾ. ಸಂಬಂಧಗಳ ಭಾವುಕತೆಯನ್ನು ನಿರ್ದೇಶಕ ಆದಿತ್ಯ ಚಿಕ್ಕಣ್ಣ ಸೊಗಸಾಗಿ ಚಿತ್ರಿಸಿದ್ದಾರಂತೆ.

ಕುಟುಂಬದ ಕಥೆಯ ಜೊತೆಗೆ ಗ್ರಾಮೀಣ ಪರಿಸರವನ್ನು ಒಳಗೊಂಡಿರುವುದು 'ವಂಶೋದ್ಧಾರಕ' ಚಿತ್ರದ ವಿಶೇಷ. 'ರೌಡಿಸಂ ಹಾಗೂ ಹಾರರ್ ಸಿನಿಮಾಗಳ ನಶೆಯಲ್ಲಿರುವ ಕನ್ನಡ ಚಿತ್ರರಂಗಕ್ಕೆ ನಮ್ಮ ಸಿನಿಮಾ ಒಂದು ಹಿತವಾದ ಅಚ್ಚರಿ' ಎನ್ನುವುದು ನಿರ್ದೇಶಕರ ವಿಶ್ಲೇಷಣೆ. ಪಟ್ಟಣದಲ್ಲಿ ಕಲಿತು ಹಳ್ಳಿಗೆ ಬಂದು ನೆಲೆಸುವ ಯುವಕನ ಪಾತ್ರ ವಿಜಯ ರಾಘವೇಂದ್ರ ಅವರದು. ಅವರಿಗೆ ಜೋಡಿಯಾಗಿ ನಟಿಸಿರುವ ಮೇಘನಾ ರಾಜ್, ಸಾಮಾಜಿಕ ಕಾರ್ಯಕರ್ತೆಯ ಪಾತ್ರಕ್ಕೆ ಜೀವ ತುಂಬಿದ್ದಾರಂತೆ.

ಶ್ರೀನಿವಾಸ ಮೂರ್ತಿ, ಲಕ್ಷ್ಮಿ, ವಿನಯಾ ಪ್ರಕಾಶ್, ವೀಣಾ ಸುಂದರ್, ರಂಗಾಯಣ ರಘು– ಹೀಗೆ, ಅನುಭವಿ ನಟರ ದಂಡೇ 'ವಂಶೋದ್ಧಾರಕ' ಚಿತ್ರದಲ್ಲಿದೆ. ಸಮಾಜಕ್ಕೆ ಹಾಗೂ ಚಿತ್ರರಸಿಕರಿಗೆ ಈ ಚಿತ್ರದಲ್ಲೊಂದು ಪರಿಣಾಮಕಾರಿ ಸಂದೇಶ ಇದೆ ಎನ್ನುತ್ತಿದೆ ಚಿತ್ರತಂಡ.

■ ರಘು

